**ಸಾಕ್ಷಿಯನ್ನು ದಿಃ 12.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 3 ನೇ ಎದುರುದಾರರ ಪರ ವಕೀಲರಿಂದಃ**

ದೂರುದಾರ ಕುಮಾರ ನನ್ನ ತಮ್ಮ. ಅಪಘಾತ ಆದಾಗ ಅವರು ನನ್ನೊಂದಿಗೆ ಇದ್ದರು. ಅವರಿಗೆ ಸಣ್ಣ ಪುಟ್ಟ ಗಾಯಗಳಾಗಿತ್ತು. ಕುಮಾರನಿಗೆ ಸಹ ಪಟ್ಟಾಗಿದ್ದ ಕಾರಣ ಅದೇ ದಿನ ದೂರು ನೀಡಲಾಗಿಲ್ಲ. ದೋಷರೋಪಣಾ ಪಟ್ಟಿಯಲ್ಲಿ ನಮಗೆ ಯಾವುದೇ ಪೆಟ್ಟಾಗಿಲ್ಲ ಎಂದು ನಮೂದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಓದಲು ಬರೆಯಲು ಬರುತ್ತದೆ. ದೋಷರೋಪಣಾ ಪಟ್ಟಿಯನ್ನು ನಾನೇ ಹಾಜರು ಪಡಿಸಿದ್ದೇನೆ. ಸದರಿ ದೋಷರೋಪಣಾ ಪಟ್ಟಿ ಯಲ್ಲಿ ನಮಗೆ ಪೆಟ್ಟಾಗಿಲ್ಲ ಎನ್ನುವುದನ್ನು ನಾನು ಓದಿಲ್ಲ. ನನಗೆ ಪಟ್ಟಾದ ಬಗ್ಗೆ ದಾಖಲೆಯನ್ನು ಪೋಲೀಸರಿಗೆ ನಾನು ನೀಡಿಲ್ಲ. ನನ್ನ ವೈದ್ಯಕೀಯ ದಾಖಲೆಗಳಲ್ಲಿ ಸೇಲ್ಫ್ ಫಾಲ್ ಎಂದು ಇದೆ ಎಂದರೆ ಸರಿಯಲ್ಲ. ಆದ ಕಾರಣ ಈ ದಿನ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ತಮ್ಮನ ಸ್ನೇಹಿತ ನಾಗರಾಜು ಕಾರನ್ನು ಚಲಾಯಿಸುತ್ತಿದ್ದ. ಆತನೇ ಸಂಬಂಧಿಯಿಂದ ಕಾರನ್ನು ತೆಗೆದುಕೊಂಡು ಬಂದಿರುತ್ತಾನೆ. ಆ ವಾಹನಕ್ಕೆ ನಾವು ಬಾಡಿಗೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಆ ವಾಹನವನ್ನು ನಾನು ಬಾಡಿಗೆ ತೆಗೆದುಕೊಂಡು ಹೋಗುತ್ತಿದ್ದರು ಈ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.